# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 54 (71) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 04.07.2023 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಸರ್ಕಾರದಿಂದ ಸ್ವಾಧೀನ ಪಡಿಸಿಕೊಂಡ ಭೂಮಿ ಎಷ್ಟು; ಸ್ವಾಧೀನ ಪಡಿಸಿಕೊಂಡ ಪ್ರತಿ ಎಕರೆ ಭೂಮಿಗೆ ನಿಗಧಿ ಪಡಿಸಿರುವ ಮಾರುಕಟ್ಟೆ ಮೌಲ್ಯ ಎಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು). | ಕಲ್ಯಾಣ ಕರ್ನಾಟಕ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ 1125-38 ಎಕರೆ ಮತ್ತು ಏಕಘಟಕ ಸಂಕೀರ್ಣಗಳಿಗಾಗಿ 64-04 ಎಕರೆ ಸೇರಿ ಒಟ್ಟು 1190-02 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ.<br><br>ಪ್ರಸ್ತಾಪಿತ ಜಮೀನುಗಳಿಗೆ ನಿಗಧಿ ಪಡಿಸಲಾಗಿರುವ ಪರಿಹಾರ ದರದ ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಈ ಜಮೀನುಗಳಿಗೆ ನಿಗಧಿ ಪಡಿಸಿರುವ ಮಾರುಕಟ್ಟೆ ಮೌಲ್ಯದ ವಿರುದ್ಧ ನ್ಯಾಯಾಲಯದಲ್ಲಿ ದಾಖಲಾದ ಹಾಗೂ ಇತ್ಯರ್ಥಗೊಂಡ ಪ್ರಕರಣಗಳು ಎಷ್ಟು; ಬಾಕಿ ಇರುವ ಪ್ರಕರಣಗಳು ಎಷ್ಟು; ನ್ಯಾಯಾಲಯದಿಂದ ಇತ್ಯರ್ಥಗೊಂಡ ಪ್ರಕರಣಗಳಲ್ಲಿ ಪ್ರತಿ ಎಕರೆಗೆ ನೀಡಲಾಗಿರುವ ಮೊತ್ತ ಎಷ್ಟು; ಹಾಗೂ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗದಿರುವ ಪ್ರಕರಣದಲ್ಲಿ ಪ್ರತಿ ಎಕರೆಗೆ ನೀಡಲಾದ ಮೊತ್ತ ಎಷ್ಟು?<br><br>(ಸಂಪೂರ್ಣ ಮಾಹಿತಿ ನೀಡುವುದು). | ಮೇಲಿನಂತೆ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಪೈಕಿ ಮೆ\|\|ಭಾರತ್ ಗ್ಯಾಸ್ ರಿಸೋರ್ಸ್ಸ್ ಪ್ರೈ. ಲಿ., ಇವರ ಯೋಜನೆಗಾಗಿ ವಿಜಯನಗರ ಜಿಲ್ಲೆ, ಹೂವಿನಹಡಗಲಿ ತಾಲ್ಲೂಕು, ಹೂವಿನಹಡಗಲಿ ಗ್ರಾಮದಲ್ಲಿ ಸ್ವಾಧೀನ ಪಡಿಸಿಕೊಂಡಿರುವ ಒಟ್ಟು 1.64 ಎಕರೆ ಜಮೀನಿಗೆ, ಎಕರೆ ಒಂದಕ್ಕೆ ರೂ.40.00 ಲಕ್ಷದಂತೆ ಭೂಪರಿಹಾರ ಧನ ನಿಗಧಿಪಡಿಸಿದ್ದು, ಸದರಿ ದರದಲ್ಲಿ ಭೂಮಾಲೀಕರು ಪರಿಹಾರ ಪಡೆಯಲು ಇಚ್ಛಿಸದ ಕಾರಣ ನಿಯಮಾನುಸಾರ ಅವಾರ್ಡ್ ರಚಿಸಿ ಪರಿಹಾರ ಧನವನ್ನು ನ್ಯಾಯಾಲಯದಲ್ಲಿ ಠೇವಣಿ ಇಡಲಾಗಿದೆ. ಈ ಪ್ರಕರಣದಲ್ಲಿ ಹೆಚ್ಚಿನ ಪರಿಹಾರ ಕೋರಿ ಭೂಮಾಲೀಕರು ಸಿವಿಲ್ ನ್ಯಾಯಾಲಯದಲ್ಲಿ ದಾಖಲು ಮಾಡಿರುವ ಎಲ್.ಎ.ಸಿ ಪ್ರಕರಣ ಸಂಖ್ಯೆ:37/2022 ಇತ್ಯರ್ಥಕ್ಕೆ ಬಾಕಿ ಇರುತ್ತದೆ. ಇದನ್ನು ಹೊರತುಪಡಿಸಿ, ಹೆಚ್ಚುವರಿ ಪರಿಹಾರ ಕೋರಿ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |

| | | |
|---|---|---|
| ಇ) | ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗಿವೆ ಹಾಗೂ ಕೈಗಾರಿಕೆಗಳು ಸ್ಥಾಪನೆಯಾಗದೇ ಉಳಿದ ಭೂಮಿ ಎಷ್ಟು; ಕೈಗಾರಿಕೆಗಳು ಸ್ಥಾಪನೆಯಾಗದಿರುವುದಕ್ಕೆ ಕಾರಣಗಳೇನು? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು). | ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಮಂಡಳಿಯು ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಲಾದ 1125.38 ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 4 ಘಟಕಗಳಿಗೆ 19.80 ಎಕರೆ ವಿಸ್ತೀರ್ಣದ ಜಮೀನನ್ನು ಹಂಚಿಕೆ ಮಾಡಿರುತ್ತದೆ.<br><br>ಏಕಘಟಕ ಸಂಕೀರ್ಣ ಯೋಜನೆಗಳಿಗಾಗಿ ಸ್ವಾಧೀನಪಡಿಸಲಾದ 64-04 ಎಕರೆ ವಿಸ್ತೀರ್ಣದ ಜಮೀನಿನ ಹಂಚಿಕೆ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.<br><br>ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನ ಪಡಿಸಲಾದ ಜಮೀನಿನ ಪೈಕಿ 1105.58 ಎಕರೆ ವಿಸ್ತೀರ್ಣದ ಜಮೀನು ಮತ್ತು ಏಕಘಟಕ ಸಂಕೀರ್ಣ ಯೋಜನೆಗಳಲ್ಲಿ 64.04 ಎಕರೆ ಜಮೀನು ಅಂದರೆ ಒಟ್ಟು 1169.62 ಎಕರೆ ವಿಸ್ತೀರ್ಣದ ಜಮೀನು ಹಂಚಿಕೆಗೆ ಬಾಕಿ ಇರುತ್ತದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ-2** ಎಂದು ಲಗತ್ತಿಸಿದೆ.<br><br>ಈ ಕೈಗಾರಿಕಾ ಪ್ರದೇಶ ಮತ್ತು ಏಕಘಟಕ ಸಂಕೀರ್ಣ ಯೋಜನೆಗಳ ಜಮೀನಿಗೆ ಸಂಬಂಧಿಸಿದಂತೆ;<br>• ಮಂಡಳಿಯು ಕಳೆದ 3 ವರ್ಷಗಳಲ್ಲಿ ಭೂಸ್ವಾಧೀನಪಡಿಸಲಾದ ಜಮೀನುಗಳ ಪೈಕಿ ಹಲವು ಪ್ರಕರಣಗಳಲ್ಲಿ ಭೂದರ ನಿಗಧಿ ಪಡಿಸಬೇಕಿರುತ್ತದೆ.<br>• ಭೂದರ ನಿಗದಿಪಡಿಸಲಾದ ಪ್ರಕರಣಗಳಲ್ಲಿ ಭಾಗಶಃ ಜಮೀನುಗಳಿಗೆ ಭೂಪರಿಹಾರ ಧನ ಪಾವತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br>• ಕೈಗಾರಿಕಾ ಪ್ರದೇಶಕ್ಕೆ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ & ವಿದ್ಯುತ್ ಸಂಪರ್ಕ ಒದಗಿಸುವ ಕಾರ್ಯ ಇನ್ನೂ ಚಾಲ್ತಿಯಲ್ಲಿರುತ್ತದೆ.<br>• ಕೈಗಾರಿಕಾ ಪ್ರದೇಶದ ರಚನೆ ಕಾರ್ಯ ಪ್ರಗತಿಯಲ್ಲಿರುವ ಹಿನ್ನೆಲೆಯಲ್ಲಿ, ಕೈಗಾರಿಕೆಗಳು ಪೂರ್ಣಮಟ್ಟದಲ್ಲಿ ಸ್ಥಾಪನೆಯಾಗಿರುವುದಿಲ್ಲ. |
| ಈ) | ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ ಕಂಪನಿಗಳಿಗೆ ರಿಯಾಯಿತಿ ದರದಲ್ಲಿ ಯಾವ ಯಾವ ಸೌಲಭ್ಯಗಳನ್ನು ಕಲ್ಪಿಸಿ ಕೊಡಲಾಗಿದೆ; (ಸಂಪೂರ್ಣ ವಿವರ ನೀಡುವುದು). | ಮೇಲೆ ತಿಳಿಸಿದ ಕೈಗಾರಿಕೆಗಳು ಸ್ಥಾಪನೆಯಾದ ನಂತರ ಅವುಗಳಿಗೆ Industrial Policy 2020-25 ರ ಅನುಸಾರ ನಿಗಧಿಪಡಿಸಲಾದ ಪ್ರೋತ್ಸಾಹಕ/ವಿವಿಧ ರೀತಿಯ ಸಹಾಯ ಧನವನ್ನು ನೀಡಲು ಅವಕಾಶವಿರುತ್ತದೆ. |

| | | |
|---|---|---|
| ಉ) | ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರದಿಂದ ನೀಡಿರುವ ಜಮೀನನ್ನು ಸಂಪೂರ್ಣ ಸದರಿ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗಿದೆಯೇ;<br><br>(ಸಂಪೂರ್ಣ ಮಾಹಿತಿ ನೀಡುವುದು). | ಸ್ವಾಧೀನಪಡಿಸಿಕೊಂಡ ಜಮೀನುಗಳನ್ನು ಉದ್ದಿಮೆದಾರರಿಗೆ ಹಂಚಿಕೆ ಮಾಡುವ ಸಂದರ್ಭದಲ್ಲಿ ಸದರಿ ಜಮೀನನ್ನು ನಿಗಧಿತ ಅವಧಿಯಲ್ಲಿ ಅನುಮೋದಿತ ಯೋಜನೆಗಳಿಗಾಗಿ ಉಪಯೋಗಿಸತಕ್ಕದ್ದು ಎಂಬ ಷರತ್ತಿನೊಂದಿಗೆ ಹಂಚಿಕೆಯನ್ನು ಮಾಡಲಾಗುತ್ತದೆ.<br><br>ಉದ್ದಿಮೆದಾರರು ಮಂಡಳಿಯ ಹಂಚಿಕೆ ನಿಯಮಾವಳಿಗಳನ್ನು ಉಲ್ಲಂಘಿಸಿದಲ್ಲಿ, ಅಂತಹ ಕಂಪನಿ/ಘಟಕಗಳಿಗೆ, ಕೆಐಎಡಿ ಕಾಯಿದೆ 1966ರ ಕಲಂ 34-ಬಿ ನೋಟಿಸ್ ಗಳನ್ನು ನೀಡಿ ನಿಯಮಾನುಸಾರ ಕ್ರಮವಹಿಸಲಾಗುತ್ತದೆ. |
| ಊ) | ಸದರಿ ಕೈಗಾರಿಕೆಗಳ ಸ್ಥಾಪನೆಯಿಂದ ಎಷ್ಟು ಉದ್ಯೋಗಗಳು ಸೃಷ್ಟಿಯಾಗಿವೆ ಮತ್ತು ಅದರಲ್ಲಿ ಉದ್ಯೋಗ ಪಡೆದ ಕನ್ನಡಿಗರು ಎಷ್ಟು? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು). | ಕಳೆದ 3 ವರ್ಷಗಳಲ್ಲಿ ಸ್ವಾಧೀನಪಡಿಸಿದ ಜಮೀನುಗಳ ಪೈಕಿ ಮಂಡಳಿಯು 4 ಘಟಕಗಳಿಗೆ 19.80 ಎಕರೆ ವಿಸ್ತೀರ್ಣದ ಜಮೀನನ್ನು ಸಾಮಾನ್ಯ ವರ್ಗದ ಉದ್ದಿಮೆದಾರರಿಗೆ ಹಂಚಿಕೆ ಮಾಡಿದ್ದು, ಸದರಿ ಘಟಕಗಳು ಇನ್ನೂ ಅನುಷ್ಠಾನದ ಹಂತದಲ್ಲಿರುತ್ತವೆ. ಬೇರೆ ವರ್ಗದ ಉದ್ದಿಮೆದಾರರು ಸದರಿ ಜಮೀನಿನಲ್ಲಿ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ.<br><br>ಕೈಗಾರಿಕೆಗಳು ಅನುಷ್ಠಾನದ ನಂತರ ಕೈಗಾರಿಕಾ ನೀತಿ 2020-25ರನ್ವಯ ರಿಯಾಯಿತಿ ಹಾಗೂ ಉತ್ತೇಜನಗಳನ್ನು ಪಡೆಯಲು ಒಟ್ಟಾರೆಯಾಗಿ ಕನಿಷ್ಠ ಶೇ. 70 ರಷ್ಟು ಉದ್ಯೋಗವನ್ನು ಕನ್ನಡಿಗರಿಗೆ ನೀಡಬೇಕಾಗುತ್ತದೆ. |
| ಋ) | ಕಂಪನಿ ಹಾಗೂ ವೈಯಕ್ತಿಕ ಹಾಗೂ Industrial Seak ಆಧಾರದ ಮೇಲೆ ಸಾಮಾನ್ಯ ಹಾಗೂ ಮಹಿಳಾ ಹಾಗೂ EWS ಹಾಗೂ OBC ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಈ ಎಲ್ಲಾ ವರ್ಗದ ಜನರ ಅರ್ಜಿಗಳ ಸಂಖ್ಯೆ ಎಷ್ಟು: ಹಾಗೂ ಎಲ್ಲಾ ವರ್ಗದ ಜನರಿಗೆ ಭೂ ಮಂಜೂರಾತಿ ಕೊಟ್ಟಿರುವ ಸಂಖ್ಯೆ ಎಷ್ಟು?<br><br>(ಜಿಲ್ಲಾವಾರು ವಿವರ ನೀಡುವುದು). | |

**ಸಂಖ್ಯೆ: ಸಿಐ 117 ಐಎಪಿ 2023**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ**
**ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**

(4) ಅನುಬಂಧ-1

ಕಳೆದ 3 ವರ್ಷಗಳ ಅವಧಿಯಲ್ಲಿ ಕಲ್ಯಾಣ ಕರ್ನಾಟಕ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕರ್ನಾಟಕ ಕೈಗಾರಿಕಾಭಿವೃದ್ಧಿ ಮಂಡಳಿ ವತಿಯಿಂದ ಕೈಗಾರಿಕಾ ಪ್ರದೇಶ ಮತ್ತು ಏಕಘಟಕ ಸಂಕೀರ್ಣಗಳಿಗೆ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ವಿವರ.

| ಕ್ರ ಸಂ | ಕೈಗಾರಿಕಾ ಪ್ರದೇಶದ ಹೆಸರು | ಗ್ರಾಮ, ತಾಲ್ಲೂಕು | ವಿಸ್ತೀರ್ಣ ಎ-ಗು | ಪ್ರತಿ ಎಕರೆಗೆ ನಿಗದಿಪಡಿಸಿದ ದರ ರೂ. ಲಕ್ಷಗಳಲ್ಲಿ | ಕಲಂ 28(4) ರ ಅಂತಿಮ ಅಧಿಸೂಚನೆ ದಿನಾಂಕ |
|---|---|---|---|---|---|
| 1 | 2 | 3 | 4 | 5 | 6 |
| | | ಕೊಪ್ಪಳ ಜಿಲ್ಲೆ | | | |
| - | - | - | - | - | - |
| | | ಕಲಬುರಗಿ ಜಿಲ್ಲೆ | | | |
| 1 | ಕಪನೂರು | ಕಪನೂರು, ಕಲಬುರಗಿ | 0-10 | 63.00 | 27-06-2022 |
| 2 | ನಂದೂರು ಕೆ | ನಂದೂರು ಕೆ, ಕಲಬುರಗಿ | 605-26 | 19.00 ರಿಂದ 20.00 | 28-11-2022 |
| | | ಒಟ್ಟು | 605-36 | | |
| | | ಯಾದಗಿರಿ ಜಿಲ್ಲೆ | | | |
| 1 | ಕಡೇಚೂರು | ಕಡೇಚೂರು ಮತ್ತು ಬಾಡಿಯಾಳ ಯಾದಗಿರಿ | 51-29 | 17.00 | 23-02-2021 |
| | | ಬಳ್ಳಾರಿ ಜಿಲ್ಲೆ | | | |
| 1 | ಸಂಜೀವರಾಯನ ಕೋಟೆ | ಸಂಜೀವರಾಯನ ಕೋಟೆ, ಬಳ್ಳಾರಿ | 154-58 | ದರ ನಿಗದಿಪಡಿಸಲು ಬಾಕಿಯಿದೆ. | 26-7-2022 |
| | | ರಾಯಚೂರು ಜಿಲ್ಲೆ | | | |
| 1 | ವಡ್ಲೂರು | ವಡ್ಲೂರು, ರಾಯಚೂರು | 260-38 | ದರ ನಿಗದಿಪಡಿಸಲು ಬಾಕಿಯಿದೆ. | 26-08-2022 |
| 2 | ಮಾನ್ವಿ | ಮಾನ್ವಿ, ರಾಯಚೂರು | 51-37 | 48.00 | 26-07-2022 |
| | | ಒಟ್ಟು | 312-35 | | |
| | | ಜುಮ್ಲಾ | 1125-38 | | |

| ಕ್ರ ಸಂ | ಏಕಘಟಕ ಸಂಕೀರ್ಣದ ಹೆಸರು | ಗ್ರಾಮ, ತಾಲ್ಲೂಕು | ವಿಸ್ತೀರ್ಣ (ಎ -ಗು) | ಪ್ರತಿ ಎಕರೆಗೆ ನಿಗದಿ ಪಡಿಸಿದ ದರ ರೂ. ಲಕ್ಷಗಳಲ್ಲಿ | ಕಲಂ 28(4) ರ ಅಂತಿಮ ಅಧಿಸೂಚನೆ ದಿನಾಂಕ: |
|---|---|---|---|---|---|
| | | ಕೊಪ್ಪಳ ಜಿಲ್ಲೆ | | | |
| 1 | ಗದಗ-ವಾಡಿ ರೈಲ್ವೆ | ಆಡೂರು, ಕೂಕನೂರು | 0-31 | 16.00 ರಿಂದ 23.00 | 15-12-2020 |
| | | ಯಾದಗಿರಿ ಜಿಲ್ಲೆ | | | |
| 1 | ಗದಗ-ವಾಡಿ ರೈಲ್ವೇ | ಶಿರಿವಾಳ, ಶಹಾಪುರ | 16-35 | 8.00 ರಿಂದ 16.00 | 11-06-2020 |
| | | ಬೀದರ್ ಜಿಲ್ಲೆ | | | |
| 1 | ಮೆ॥ ಭಾರತ್ ಗ್ಯಾಸ್ ರಿಸೋರ್ಸ್ ಲಿ. | ಜಲಸಂಗಿ, ಹುಮನಾಬಾದ್ | 1-00 | 12.00 | 22-10-2021 |
| | | ಬಳ್ಳಾರಿ ಜಿಲ್ಲೆ | | | |
| 1 | ಮೆ॥ ಮಿನರಾ ಸ್ಟೀಲ್ಸ್ ಅಂಡ್ ಪವರ್ ಪ್ರೈ.ಲಿ | ಯರಬನಹಳ್ಳಿ ಸಂಡೂರು | 16-75 | 9.00 | 28-09-2020 |
| 2 | ಕರ್ನಾಟಕ ವಿಜಯನಗರ ಸ್ಟೀಲ್ | ವೇಣಿವೀರಾಪುರ, ಕುರುಗೋಡು | 3-76 | 23.00 | 27-08-2021 |
| 3 | ಜೆ.ಎಸ್.ಡಬ್ಲ್ಯೂ ಸ್ಟೀಲ್ | 61-ಗೋನಾಳ, ಹೊಸಪೇಟೆ | 3-36 | ದರ ನಿಗದಿಪಡಿಸಲು ಬಾಕಿಯಿದೆ. | 07-09-2022 |
| | | ಒಟ್ಟು | 25-07 | | |
| | | ರಾಯಚೂರು ಜಿಲ್ಲೆ | | | |
| - | - | - | - | - | - |
| | | ವಿಜಯನಗರ ಜಿಲ್ಲೆ | | | |
| 1 | ಮೆ॥ ಭಾರತ್ ಗ್ಯಾಸ್ ರಿಸೌರ್ಸ್ ಲಿ. | ಹೂವಿನಹಡಗಲಿ ಮತ್ತು ತಾ॥ | 1-64 | 40.00 | 22-04-2021 |
| | | ಕಲಬುರಗಿ ಜಿಲ್ಲೆ | | | |
| 1 | ಗದಗ-ವಾಡಿ ರೈಲ್ವೆ | ಹಲಕಟ್ಟ, ಚಿತ್ತಾಪುರ | 3-36 | 8.00 ರಿಂದ 16.00 | 16-07-2020 |
| 2 | ಕೆಎಸ್‌ಎಸ್‌ಐಡಿಸಿ | ಪಿ.ಚಿತ್ತಾಪುರ, ಚಿತ್ತಾಪುರ | 1-06 | 16.00 | 24-08-2020 |
| 3 | ಗದಗ-ವಾಡಿ ರೈಲ್ವೆ | ಮಲ್ಲಾ(ಕೆ), ಜೇವರ್ಗಿ | 1-25 | 8.00 ರಿಂದ 16.00 | 16-11-2022 |
| 4 | ಬಿಪಿಸಿಎಲ್ | ಸಂದೂರ (ಕೆ). ಕಲಬುರಗಿ | 11-00 | 20.00 | 15-12-2020 |
| | | ಒಟ್ಟು | 17-27 | | |
| | | ಜುಮ್ಲಾ | 64-04 | | |

| ಕೈಗಾರಿಕಾ ಪ್ರದೇಶ (ಎ-ಗು) | ಏಕಘಟಕ ಸಂಕೀರ್ಣ (ಎ-ಗು) | ಒಟ್ಟು |
|---|---|---|
| 1125-38 | 64-04 | 1190-02 |

ವಿಶೇಷ ಜಿಲ್ಲಾಧಿಕಾರಿ

(14)

(8)

ಅನುಬಂಧ-2

| ಕ್ರಸಂ. | ಜಿಲ್ಲೆ | ಸ್ವಾಧೀನಪಡಿಸಲಾದ ವಿಸ್ತೀರ್ಣ | | ಹಂಚಿಕೆ ಮಾಡಲಾದ ಘಟಕಗಳ ಸಂಖ್ಯೆ: | | ಹಂಚಿಕೆ ಮಾಡಲಾದ ವಿಸ್ತೀರ್ಣ | | ಬಾಕಿ ಉಳಿದ ಜಮೀನು | |
|---|---|---|---|---|---|---|---|---|---|
| | | ಕೈ.ಪ್ರ (ಎಕರೆ ಗುಂಟೆಗಳಲ್ಲಿ) | ಏಕಘಟಕ ಸಂಕೀರ್ಣ | ಕೈ.ಪ್ರ | ಏಕಘಟ ಸಂಕೀರ್ಣ | ಕೈ.ಪ್ರ | ಏಕಘಟ ಸಂಕೀರ್ಣ | ಕೈ.ಪ್ರ | ಏಕಘಟಕ ಸಂಕೀರ್ಣ |
| 1 | ಬೀದರ್ | - | 1.00 | - | - | - | - | - | 1.00 |
| 2 | ಕಲಬರಗಿ | 605.36 | 17.24 | - | - | - | - | 605.36 | 17.24 |
| 3 | ರಾಯಚೂರು | 312.35 | - | - | - | - | - | 312.35 | - |
| 4 | ಕೊಪ್ಪಳ | - | 0.31 | - | - | - | - | - | 0.31 |
| 5 | ಬಳ್ಳಾರಿ | 154.58 | 25.07 | - | - | - | - | 154.58 | 25.07 |
| 6 | ಯಾದಗಿರಿ | 51.29 | 16.35 | 4 | - | 19.80 | - | 31.49 | 16.35 |
| 7 | ವಿಜಯನಗರ | - | 1.64 | - | - | - | - | - | 1.64 |
| ಒಟ್ಟು | | 1125.38 | 64.04 | 4 | 0 | 19.80 | 0 | 1105.58 | 64.04 |